International Journal of Kannada Research
www.kannadajournal.com

ISSN: 2454–5813
IJKR 2024; 10(2): 88-90
© 2024 IJKR
www.kannadajournal.com
Received: 07-01-2024
Accepted: 12-02-2024

**ಡಾ. ಶಂಕರ ಎಸ್. ಕೋಳಿ**
ಕನ್ನಡ ಉಪನ್ಯಾಸಕರು, ಕೆ.ಎಲ್.ಇ
ಪದವಿ ಮಹಾವಿದ್ಯಾಲಯ
ಮಹಾಲಿಂಗಪುರ, ಕರ್ನಾಟಕ,
ಭಾರತ

**Corresponding Author:**
**ಡಾ. ಶಂಕರ ಎಸ್. ಕೋಳಿ**
ಕನ್ನಡ ಉಪನ್ಯಾಸಕರು, ಕೆ.ಎಲ್.ಇ
ಪದವಿ ಮಹಾವಿದ್ಯಾಲಯ
ಮಹಾಲಿಂಗಪುರ, ಕರ್ನಾಟಕ,
ಭಾರತ

# ಪಂಚತಂತ್ರ ಕೃತಿಯಲ್ಲಿ ಅಪರಾಧ ಭೇದ ಪ್ರಕರಣ ಕಥಾವಲೋಕನ

**ಡಾ. ಶಂಕರ ಎಸ್. ಕೋಳಿ**

**ಪೀಠಿಕೆ**

ಭಾರತದ ದೇಶದಲ್ಲಿ ಶ್ರೀ ರಾಮಾಯಣ ಮತ್ತು ಮಹಾಭಾರತ ಪುರಾಣ ಕೃತಿಗಳ ನಂತರದಲ್ಲಿ ಅತಿ ಹೆಚ್ಚು ಓದುಗರ ಮೆಚ್ಚುಗೆಯನ್ನು ಪಡೆದ ಕೃತಿ ಪಂಚತಂತ್ರ. ಕಥೆಯೊಳಗೆ ಕಥೆಗಳನ್ನು ಹೆಣೆಯುತ್ತಾ ಹೋಗುವ ತಂತ್ರ–ನೀತಿ ನಿರೂಪಣೆ ಕಾಲಕ್ಕೆ ತಕ್ಕಂತೆ ಉಪಕತೆಗಳ ಮೂಲಕ ಜನಮನ್ನಣೆಗಳಿಸಿದ ಈ ಕೃತಿ ವಿಶ್ವದ ಅತಿ ಹೆಚ್ಚು ಭಾಷೆಗಳಿಗೆ ಭಾಷಾಂತರವಾದ ಕೃತಿಯಾಗಿದೆ. ಪ್ರಪಂಚದ ಅತಿ ಹೆಚ್ಚು ಭಾಷೆಗೆ ಭಾಷಾಂತರವಾದ 'ಬೈಬಲ್' ಕೃತಿಯ ನಂತರದ ಸ್ಥಾನ ಪಂಚತಂತ್ರಕ್ಕೆ ಸಲ್ಲಬೇಕು ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಪ್ರಪಂಚದಲ್ಲಿ ಪ್ರಾಮುಖ್ಯತೆ ಪಡೆದ ಕೆಲವೇ ಕೆಲವು ಗ್ರಂಥಗಳಲ್ಲಿ ಇದು ಕೂಡಾ ಒಂದಾಗಿದೆ. ಪಂಚತಂತ್ರದ ಪ್ರಸಾರವೂ ರಾಜಮಹಾರಾಜರ ಮತ್ತು ಶ್ರೀಮಂತರ ಬೆಂಬಲದಿಂದಲೂ ಜನಪ್ರಿಯವಾಗಿದೆ. ಈ ಕೃತಿ ತನ್ನ ಸ್ವಂತ ಸತ್ವ ಗುಣದಿಂದ ಪ್ರಪಂಚದ ಎಲ್ಲ ಕಡೆಗಳಲ್ಲೂ ಹೆಸರುವಾಸಿಯಾಗಿದೆ. ಪಂಚತಂತ್ರದ ಉಗಮ ಮನುಷ್ಯನ ಚರಿತ್ರೆಯಲ್ಲಿ ಕತೆ ಹೇಳುವ ಸಂಪ್ರದಾಯವು ಮಾನವ ಸಮಾಜದ ಉಗಮದಿಂದ ಪ್ರಾರಂಭವಾಯಿತೆಂದು ಹೇಳಬಹುದು. ಮನುಷ್ಯ ಮಾತನಾಡಲು ಕಲಿತ ದಿಬದಿಂದಲೂ ಕಥೆ ಹೇಳುತ್ತಾ, ಕಥೆ ಕೇಳುತ್ತಾ ಬಂದಿದ್ದಾನೆ. ಕಥೆ ಹೇಳುವ ಸ್ವರೂಪದಿಂದ, ಬರೆದಿಡುವ ಪದ್ಧತಿ ಅನಂತರ ಸೃಷ್ಟಿಯಾಯಿತೆಂದು ಹೇಳಬಹುದು. ಪಂಚತಂತ್ರದ ನೀತಿ ಕತೆಗಳ ಉಗಮ ಮತ್ತು ಬೆಳವಣಿಗೆ ಎರಡು ಹಂತಗಳಲ್ಲಿ ನಡೆಯಿತು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ವೇದ ಉಪನಿಷತ್ತುಗಳಲ್ಲಿ ಬಂದಿರುವ ಅಂಶಗಳು ಕಥಾ ಸಾಹಿತ್ಯದ ಆರಂಭದ ಕಾಲವನ್ನು ತೋರಿಸುತ್ತವೆ. ಅವು ಮುಂದೆ ಮಹಾಭಾರತ, ಭಾಗವತ ಪುರಾಣ ಉಪ ಪುರಾಣಗಳಲ್ಲಿ ಮುಂದುವರಿದಿವೆ. ಧಾರ್ಮಿಕ ಬೋಧನೆಗಾಗಿ ಬಂದ ಭಗವಾನ್ ಬುದ್ಧನ ಜಾತಕ ಕತೆಗಳು ಮತ್ತು ವಿವಿಧ ಆರಾಧನಾ ಕಥೆಗಳು ನಿದರ್ಶನಗಳಿಗಿಂತ ಹೆಚ್ಚು ವಿಸ್ತರಣೆ, ವಿವರಣೆಗಳಿಂದ ಕೂಡಿದ್ದು ಈ ಕತೆಗಳಲ್ಲಿ ತಾತ್ವಿಕ ಮತ್ತು ಧಾರ್ಮಿಕ ಮನೋಭಾವಗಳಿಗೆ ಅವುಗಳಲ್ಲಿ ಪ್ರಾಮುಖ್ಯತೆ ಬಂದಿರುತ್ತದೆ. ಈ ಎರಡು ಹಂತಗಳ ನಂತರ ಪಂಚತಂತ್ರದ ನೀತಿ ಕತೆಗಳು ಉಗಮವಾಗಿ ಜನಸಾಮಾನ್ಯರ ಅಭಿರುಚಿಗೆ ತಕ್ಕಂತೆ ನಿರ್ಮಿತವಾಗಿದೆ. ಇವುಗಳಲ್ಲಿ ಭೋಧನೆ ಮತ್ತು ಮನರಂಜನೆ ಸಂಮಿಲನವಾಗಿ ಸಾಹಿತ್ಯದಲ್ಲಿ ನೀತಿ ಕಥಗೆ ಒಂದು ವಿಶಿಷ್ಟ ಸ್ಥಾನ ದೊರಕುವಂತೆ ಈ ಕಥಾ ರಚನೆ ಬಂದಿದೆ ಎಂದು ವಿದ್ವಾಂಸರು ತಿಳಿಸಿರುವ ಆಂಶವನ್ನು ನಾವು ಕಾಣಬಹುದು ಪಂಚತಂತ್ರದ ಕವಿ ಸಮಯ ಭಾರತದ ಸಾಹಿತ್ಯ ಕ್ಷೇತ್ರದಲ್ಲಿ ನಾವು ವಿಷ್ಣುಶರ್ಮನ ಪಂಚತಂತ್ರ ವಸುಭಾಗಭಟ್ಟನ ಪಂಚತಂತ್ರ ಮತ್ತು ದುರ್ಗಸಿಂಹನ "ಕರ್ನಾಟಕ ಪಂಚತಂತ್ರ" ಎಂಬ ಮೂರು ಬಗೆಯ ಪಂಚತಂತ್ರ ಕೃತಿಗಳನ್ನು ಕಾಣಬಹುದಾಗಿದೆ.

ವಿಷ್ಣಶರ್ಮನ ಪಂಚತಂತ್ರ: ವಿಷ್ಣುಶರ್ಮನು ಓರ್ವ ಗುರು ಶ್ರುತಿಸ್ಮೃತಿ ಪುರಾಣ ಇತಿಹಾಸವನ್ನು ಅರಿತ ರಾಜಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ನ್ಯಾಯಶಾಸ್ತ್ರಜ್ಞ, ಕಾನೂನು ಪಂಡಿತ ಪರಿಣಿತನಾಗಿ ಪಂಚತಂತ್ರವೆಂಬ ಉಪದೇಶಾತ್ಮಕ ಗ್ರಂಥಗಳನ್ನು ಬರೆದು ದಕ್ಷಿಣವಲಯದಲ್ಲಿ 'ಮಹಿಳಾಪುರ'ವನ್ನು ಆಳುತ್ತಿದ್ದ ಅಮರಶಕ್ತಿ ಭೂಪಾಲನ ಆಸ್ಥಾನದಲ್ಲಿ ಈ ಗ್ರಂಥವನ್ನು ಪಾರಾಯಣ ಮಾಡಿದನು. ಈ ಪಾರಾಯಣವನ್ನು ಕೇಳಿದ ರಾಜನು ಬಹಳ ಸಂತೋಷಪಟ್ಟನು. ಅಲ್ಲದೆ ಈ ಗ್ರಂಥದ ಮೂಲಕ ದಡ್ಡರಾದ ರಾಜಕುಮಾರರನ್ನು ಬುದ್ಧಿವಂತರನ್ನಾಗಿ ಮಾಡಲು ವಿಷ್ಣುಶರ್ಮರಿಗೆ ಸಹಾಯ–ಸಹಕಾರ ನೀಡಿ ಗ್ರಂಥದ ಜನಪ್ರಿಯತೆಯನ್ನು ಹೆಚ್ಚಿಸಲು ಪ್ರಯತ್ನಪಟ್ಟನು.

ಸಂಸ್ಕೃತದಲ್ಲಿ ರಚನೆಯಾದ ವಿಷ್ಣುಶರ್ಮನ ಈ ಪಂಚತಂತ್ರದ ಕಥೆಗಳನ್ನು ಬೂರ್ಜೋಯಿ ಎಂಬ ವೈದ್ಯನು ಕ್ರಿ. ಶ 570 ರಲ್ಲಿ ಪೆಹಲ್ವಿ ಭಾಷೆಗೆ ಭಾಷಾಂತರ ಮಾಡಿದನು.

ಆ ಸಮಯದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಪರ್ಷಿಯಾ ದೇಶದ ದೊರೆ ಖುಸ್ರೋ ಆನೋ ಸರ್ವನ್ ಎಂಬಾತ ಭಾರತಕ್ಕೆ ಭೇಟಿ ನೀಡಿದಾಗ ಈ ಪಂಚತಂತ್ರದ ಕಥೆಗಳನ್ನು ಕೇಳಿ ಸಂತೋಷಪಟ್ಟನು ಎಂಬ ಅಂಶ ಕಂಡುಬರುತ್ತದೆ. ಕ್ರಿ. ಶ 6 ನೆಯ ಶತಮಾನದಲ್ಲಿ ಪರ್ಷಿಯಾ ದೇಶದ ಕ್ರಿಶ್ಚಿಯನ್ ವಿದ್ವಾಂಸನಾದ ಬೂದ್ ಎಂಬಾತ ಪ್ರಾಚೀನ ಸಿರಿಯಾ ಭಾಷೆಗೆ ಭಾಷಾಂತರ ಮಾಡಿದ್ದು ಇದರ ಎರಡು ಭಾಷಾಂತರಗಳು ಜರ್ಮನ್ ಭಾಷೆಯಲ್ಲಿ ಬಂದವು. ಕ್ರಿ. ಶ 8 ನೆಯ ಶತಮಾನದಲ್ಲಿ ಪೆಹಲ್ವಿ ಭಾಷೆಯ ಪಂಚತಂತ್ರ ಅರೇಬಿಯಾ ಭಾಷೆಗೆ ಭಾಷಾಂತರವಾಗಿ ಜನಪ್ರಿಯವಾಯಿತು. ಆ ಮೇಲೆ ಯುರೋಪಿಯನ್ ಭಾಷೆಗಳಾದ ಇಂಗ್ಲಿಷ್ ಜರ್ಮನ್ ಡೆನ್ನಿಸ್ ಫ್ರೇಚ್ ರಷ್ಯನ್ ಇಟಾಲಿಯನ್ ಸ್ಪ್ಯಾನಿಶ್ ಚೆಕ್ ಭಾಷೆಗಳಲ್ಲಿ ಭಾಷಾಂತರವಾಯಿತು. ಇದೇ ಸಂದರ್ಭಗಳಲ್ಲಿ ಸ್ಪೇನ್, ಗ್ರೀಸ್ ದೇಶಗಳಲ್ಲಿ ಪಂಚತಂತ್ರದ ಭಾಷಾಂತರ ಕೃತಿಗಳು ಮಾರುಕಟ್ಟೆಗೆ ಬಂದವು. ಗ್ರೀಕ್ ಭಾಷೆಯ ಈ ಕೃತಿಗಳು ಡಲ್ಲಾಸ್ ರಾಜ್ಯದಲ್ಲಿ ಅತಿ ಹೆಚ್ಚು ಮಾರಾಟವಾದವು ನಂತರ ರಬ್ಬಾನಿ ಜೋಡ್ ಎಂಬುವವನು ಈ ಪಂಚತಂತ್ರ ಕೃತಿಯನ್ನು ಹಿಬ್ರೂ ಭಾಷೆಗೆ ಭಾಷಾಂತರ ಮಾಡಿದನು. ಆನಂತರ ಜರ್ಮನ್, ರಷ್ಯಾ, ಉತ್ತರ ಆಫ್ರಿಕಾ ದೇಶಗಳಲ್ಲಿ ಪ್ರಕಟವಾದವು. ಇಂಗ್ಲೆಂಡ್ ದೇಶದ 'ನಾರ್ತ್' ಎಂಬಾತ ಕ್ರಿ. ಶ 1570 ರಲ್ಲಿ ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಿಸಿದನು. ಈ ಕೃತಿ ಇಂಗ್ಲೆಂಡ್, ಸ್ಕಾಟ್ಲೆಂಡ್, ಐರ್ಲೆಂಡ್, ಅಮೇರಿಕಾ, ನ್ಯೂಜಿಲೆಂಡ್, ಆಸ್ಟ್ರೇಲಿಯಾ ದೇಶಗಳಲ್ಲಿ ಸಂಚರಿಸಿ ತನ್ನ ಸ್ಥಾನವನ್ನು ಭದ್ರ ಪಡಿಸಿಕೊಂಡಿತು. ಹೀಗೆ ವಿಷ್ಣುಶರ್ಮನ ಪಂಚತಂತ್ರ ಕೃತಿಯು ಪೆಹಲ್ವಿ ಭಾಷೆಯ ಭಾಷಾಂತರದಿಂದ ಸುಮಾರು ಹದಿಮೂರು ಶತಮಾನಗಳಲ್ಲಿ ದೇಶ–ದೇಶಗಳಲ್ಲೆಲ್ಲ ಸಂಚರಿಸಿ ಭಾಷಾಂತರ ಮರು ಭಾಷಾಂತರ ಪ್ರತಿ ಭಾಷಾಂತರ ಗದ್ಯದಿಂದ ಪದ್ಯ, ಪದ್ಯದಿಂದ ಗದ್ಯ ಮುಂತಾದ ರೂಪಾಂತರವನ್ನು ಹೊಂದಿ ಏಶಿಯಾ ಮತ್ತು ಯುರೋಪ್ ಖಂಡಗಳ ಬಹುಭಾಗಗಳಲ್ಲಿ ವಿವಿಧ ಹೆಸರುಗಳಲ್ಲಿ ವಿವಿಧ ರೂಪಗಳಲ್ಲಿ ಸಂಚಾರ ಮಾಡಿ ಇಂಗ್ಲೀಷ್, ಪರ್ಷಿಯಾ, ಅರಬ್ಬಿ ಭಾಷೆಯ ಮೂಲಕ ಮತ್ತೆ ಭಾರತವನ್ನು ಪ್ರವೇಶಿಸಿತು.

ವಸುಭಾಗ ಭಟ್ಟನ ಪಂಚತಂತ್ರ: ವಸುಭಾಗ ಭಟ್ಟ ಮಹಾ ಮೇಧಾವಿ ಸಮಸ್ತ ಶಾಸ್ತ್ರ ವಿಶಾರದನು ಆಗಿದ್ದು ಓರ್ವ ಆದರ್ಶ ಶಿಕ್ಷಕ, ಅತ್ಯುತ್ತಮ ಕಥೆಗಾರ. ಕಥೆಗಳನ್ನು ಹೇಳಿ ಹೇಗೆ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಬೇಕೆಂಬ ಯುಕ್ತಿ ಅವನಿಗೆ ತಿಳಿದಿತ್ತು. ಇವನ ಪಂಚತಂತ್ರ ದಕ್ಷಿಣ ಭಾರತ ಹಾಗೂ ಆಗ್ನೇಯ ಏಷಿಯಾ ದೇಶಗಳಲ್ಲಿ ಪ್ರಚಾರಗೊಂಡಿದೆ. ಹಾಹೂ ತಮಿಳು ಭಾಷೆಯಲ್ಲಿ ಅನುವಾದವಾಗಿ ತಮಿಳುನಾಡಿನಲ್ಲೆಲ್ಲಾ ಓಡಾಡಿ ತೆಲಗಿನಲ್ಲಿ ಭಾಷಾಂತರವಾಗಿ ಆಂಧ್ರಪ್ರದೇಶದಲ್ಲೆಲ್ಲ ಪ್ರಚಾರವಾಯಿತು. 12ನೆಯ ಶತಮಾನದಲ್ಲಿ ಶ್ರೀಲಂಕಾ ಜಾವಾ, ಸುಮಾತ್ರ, ಮಲಯ, ಲಾವೋಸ್, ಥೈಲಾಂಡ್, ಫಿಲಿಫೈನ್ಸ್ ಮುಂತಾದ ದೇಶಗಳಲ್ಲಿ ಪ್ರವಾಸ ಮಾಡಿತು. ಜಾವಾ ದ್ವೀಪದಲ್ಲಿ ಪ್ರಚಾರದಲ್ಲಿರುವ ಪಂಚತಂತ್ರಕ್ಕೆ ತಂತ್ರಿ, ತಂತ್ರಿ ಕಾಮಾಂಧಕ, ತಂತ್ರಿ ಚರಿತೆ ಎಂಬ ಹೆಸರುಗಳಿಂದ ಕರೆಯಲಾಗುತ್ತದೆ. ಥಾಯ್ಲೆಂಡ್ ದೇಶದಲ್ಲಿ ನಂಗ ತಂತ್ರಿ ಸಂಭಾಷಣೆಗಳು ಎಂಬ ಹೆಸರಿನಿಂದ ಪ್ರಚಾರದಲ್ಲಿದೆ. ಕ್ರಿ. ಶ 7 ನೆಯ ಶತಮಾನಕ್ಕಿಂತ ಮೊದಲೇ ಆಗ್ನೇಯ ಏಷಿಯಾ ದೇಶಗಳಲ್ಲಿ ವಸುಭಾಗಭಟ್ಟನ ಪಂಚತಂತ್ರ ಪ್ರಕಾಶನಗೊಂಡಿತ್ತು ಎಂಬ ಅಭಿಪ್ರಾಯವನ್ನು ಜಾರ್ಜೆಟ್ ಆರ್ ಟೋಲ್ ಎಂಬ ವಿದ್ವಾಂಸನು ವ್ಯಕ್ತಪಡಿಸಿದ್ದಾನೆ.

ದುರ್ಗಸಿಂಹನ ಪಂಚತಂತ್ರ: ವಿಷ್ಣುಶರ್ಮ ಮತ್ತು ವಸುಭಾಗಭಟ್ಟ ಇವರಿಬ್ಬರ ಪಂಚತಂತ್ರವನ್ನು ದುರ್ಗಸಿಂಹನು 'ಕರ್ನಾಟಕ ಪಂಚತಂತ್ರ' ಎಂಬ ಹೆಸರಿನ ಪುನರ್ ಸೃಷ್ಟಿ ಮಾಡಿದ್ದಾನೆಂದು ಹಲವಾರು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಭರತ ಖಂಡದ ಕರ್ನಾಟಕ ರಾಜ್ಯದ ಅಗ್ರಹಾರವೊಂದರಲ್ಲಿ 10 ನೆಯ ಶತಮಾನದಲ್ಲಿ ಇವನು ಜೀವಿಸಿದ್ದನು ಎಂದು ಹೇಳಬಹುದು. ಇವನು ವಿದ್ವನ್ ಮಣಿ, ಧರ್ಮ ಮೂರ್ತಿ, ವಿನಯ ಧೀನ ವನುತ ಕುಲೀನ ಸತ್ಯವ್ರತ ಎಂಬ ಹೆಸರು ಪಡೆದಿದ್ದನು. ಈತನ 'ಕರ್ನಾಟಕ ಪಂಚತಂತ್ರ'ದಲ್ಲಿ ಪ್ರಾಚೀನ ನೀತಿ ಕತೆಗಳು ಪ್ರಧಾನವಾಗಿವೆ. ಈ ಸಮಯದಲ್ಲಿ ಜೈನ ಸಾಹಿತ್ಯ ಉತ್ಕೃಷ್ಟ ಸ್ಥಿತಿಯಲ್ಲಿ ಇರುವುದರಿಂದ ಜೈನ ಧರ್ಮಕ್ಕೆ ಸೇರಿದ ಕೇವಲ ಜ್ಞಾನ, ರೌದ್ರ ಧ್ಯಾನ, ಜನ್ಮಾಂತರದ ವಾಸನೆ, ದಿಗಂಬರ ಶ್ರಾವಣ ಚೆರಿಗೆ ಇನ್ನೂ ಮುಂತಾದ ಅಂಶಗಳು ಇದರಲ್ಲಿ ಕೂಡಿರುವುದನ್ನು ನಾವು ಕಾಣಬಹುದು. ಹೀಗೆ ಈ ಮೂರು ಬರೆದ ಪಂಚತಂತ್ರ ಕೃತಿಗಳು ಕಾಲದಿಂದ ಕಾಲಕ್ಕೆ–ದೇಶದಿಂದ ದೇಶಕ್ಕೆ ವಿಸ್ತಾರವಾಗುತ್ತಾ, ವಿಕಾಸವಾಗುತ್ತಾ ಸಾಗಿರುವುದಕ್ಕೆ ಸ್ಪಷ್ಟ ನಿದರ್ಶನಾಗಿದೆ.

ಪಂಚತಂತ್ರ ಕೃತಿಗಳಲ್ಲಿ ಅಪರಾಧ ಭೇದ ಪ್ರಕರಣಗಳು: ಪಂಚತಂತ್ರ ಕೃತಿಗಳಲ್ಲಿ ಅನೇಕ ನೀತಿ ಕಥೆಗಳಿವೆ. ಕೃತಿಕಾರರು ಈ ನೀತಿ ಕಥೆಗಳ ಮೂಲಕ ಅಂದಿನ ಅಪರಾಧ ಪ್ರಕರಣಗಳನ್ನು ಬೇಧಿಸುವ ತಂತ್ರಗಳನ್ನು ನಿರೂಪಿಸಿದ್ದಾರೆ. ಈ ನೀತಿ ಕತೆಗಳನ್ನು ಆಳವಾಗಿ ತಿಳಿದುಕೊಂಡರೆ ಆಧುನಿಕ ಯುಗದ ಇಂದಿನ ಪೋಲಿಸ್ ವ್ಯವಸ್ಥೆಯ ಅಪರಾಧ ಪ್ರಕರಣಗಳನ್ನು ಭೇದಿಸುವ ತಂತ್ರಗಳು, ಕೌಶಲ್ಯಗಳು, ಕಾನೂನುಗಳು, ನಿಯಮ ಪಾಲನೆಗಳು ತಿಳಿಯುತ್ತವೆ. ಈ ಕೃತಿ ಮನೋವಿಜ್ಞಾನದ ಹಿನ್ನಲೆಯಲ್ಲಿ ರಚನೆಯಾಗಿವೆ. 'ಕರ್ನಾಟಕ ಪಂಚತಂತ್ರ' ದಲ್ಲಿ ಅಪರಾಧ ಪ್ರಕರಣಗಳನ್ನು ಬೇಧಿಸುವ ಹಂತಗಳನ್ನು ಗುರುತಿಸಿದ್ದಾನೆ. 1) ಪೀಠಿಕಾ ಸಹಿತ ಭೇದ ಪ್ರಕರಣಂ 2) ಪರೀಕ್ಷಾ ವ್ಯಾವರ್ಣನಂ 3) ವಿಶ್ವಾಸ ಪ್ರಕರಣಂ 4) ವಂಚನಾ ಪ್ರಕರಣಂ 5) ಮಿತ್ರಕಾರ್ಯ ಪ್ರಕರಣಂ ಈ ಕಥೆಗಳಲ್ಲಿ ಮನುಷ್ಯರು ಮಾತ್ರವಲ್ಲದೆ ಪಶು–ಪಕ್ಷಿಗಳು, ಕ್ರಿಮಿಕೀಟಗಳು ಮನುಷ್ಯರಂತೆ ಮಾತನಾಡುವುದು. ಜೀವನದ ಸುಖ–ದುಃಖಗಳನ್ನು ನಿರೂಪಿಸುವುದೂ ವೈಶಿಷ್ಟ್ಯವಾಗಿದೆ. ಚದುರಂಗದಾಟ, ದತ್ತಾಂಶ ಪದ್ಧತಿ ಮತ್ತು ನೀತಿ ಕಥೆಗಳ ಮೂಲಕ ಕಲಿಸುವುದು ಇವು ಮೂರು ಭಾರತೀಯರ ಸಂಶೋಧನೆ ಎಂದು ಸರ್ ವಿಲಿಯಂ ಜೋನ್ಸ್ (Our Oreiental Heritage – p.578) ದಲ್ಲಿ ಸಮರ್ಪಕವಾಗಿ ಗುರುತಿಸಿದರು. ಈ ಕಥೆಗಳಲ್ಲಿ ಪಶು–ಪಕ್ಷಿ ಮುಂತಾದ ಪ್ರಾಣಿಗಳಿಗೆ ಮಾನವನ ಗುಣಗಳಿರುವದನ್ನು ಪ್ರಮುಖವಾಗಿ ಕಾಣಬಹುದು. ಅಲ್ಲದೆ ಈ ಪಶು–ಪಕ್ಷಿ–ಪ್ರಾಣಿಗಳ ವಿಶಿಷ್ಟ ನಡತೆಯಿಂದ ಮಾನವರು ಅನೇಕ ಗುಣಗಳನ್ನು ಕಲಿಯಲು ಸಾಧ್ಯವಿದೆ. ಈ ಪಂಚತಂತ್ರದ ಕರಟಕ, ದಮನಕ, ಪಿಂಗಳಕ, ಸಂಜೀವಕ ಎಂಬ ಸ್ಥಾಯಿ ಪಾತ್ರಗಳು ನಮ್ಮ ಮನಸ್ಸಿನ ಮೇಲೆ ತೀವ್ರ ಪ್ರಭಾವವನ್ನು ಬೀರುತ್ತವೆ ಹಾಗೂ ಸತ್ಸಂಗದ ಮಹಿಮೆ ತೀವ್ರವಾಗಿ ಪ್ರತಿಬಿಂತವಾಗಿದೆ. ಈ ಮೇಲಿನ ನಾಲ್ಕು ಕರ್ನಾಟಕ ಪಂಚತಂತ್ರದ ಭೇದ ಪ್ರಕರಣಗಳನ್ನು ತಿಳಿಯಬೇಕಾದರೆ. ಪ್ರತಿಯೊಂದು ಪ್ರಕರಣದಲ್ಲಿ ಬರುವ ಕತೆಗಳನ್ನು ಆಳವಾಗಿ ಅಧ್ಯಯನ ಮಾಡಿದಾಗ ಅಪರಾಧ ಭೇದಿಸುವ ತಂತ್ರಗಳು ತಿಳಿಯುತ್ತವೆ. ಮೋದಲನೆಯ ಪೀಠಿಕಾ ಸಹಿತ ಭೇದ ಪ್ರಕರಣಂ ದಲ್ಲಿ ನರಿಯ ಕತೆ, ಕಚದ್ರುಮನ ಕತೆ, ಕೀಲುನುರ್ಚಿತ ಕೋಡಗನ ಕಥೆ, ನರಿಯುಂ ಬಿಲನಂ ಕತೆ, ನರಿಯುಂ ಭೇರಿಯುಂ, ದೇವಶರ್ಮನ ಕಥೆ, ಕಾಗೆ ಕೃಷ್ಣಸರ್ಪನಂ ಕೊಂದ ಕಥೆ, ಕೊಕ್ಕರೆಯುಮೇಡಿಯುಂ ಕಥೆ, ಮೊಲಂ ಸಿಂಹಮಂ ಕೊಂದ ಕಥೆ, ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆ, ಶಿವಭೂತಿಯ ಕಥೆ, ಎರಡು ಗಿಣಿಗಳ ಕಥೆ, ತಿಗುಣೆಯುಂ ಕೂರಿಯುಂ, ಕೃಷ್ಣೋರಗನನೊಳಕೊಂಡ ಒಳ್ಳೆಗಳ ಕಥೆ, ರಾಜಹಂಸನುಂ ಆಂದೆಯುಂ, ಒಟ್ಟೆಯುಂ ಕಾಗೆಯುಂ, ನಾಳೀಜಂಘನೆಂಬ ಗೋಲಾಂಗೂಲದ ಕಥೆ, ನಾಲ್ವರ್ ಧೂರ್ತರ್

ಓರ್ವ ಬ್ರಾಹ್ಮಣನಂ ವಂಚಿಸಿದ ಕಥೆ, ಟಿಟ್ಟಿಭಮಿಥುನಂಗಳ ಕಥೆ, ಕಚ್ಛಪ ಕಥೆ, ದೇವದತ್ತನ ಕಥೆ, ಸೊಸೆಯ ಮಾತಂ ಕೇಳದತ್ತೆಯ ಕಥೆ, ಯದ್ಭವಿಷ್ಯನೆಂಬ ಮತ್ಸ್ಯದ ಕಥೆ, ಆರ್ಥೀ ದೋಷಂ ನ ಪಶ್ಯತಿ, ದುಷ್ಟಬುದ್ಧಿಯುಂ ಧರ್ಮಬುದ್ಧಿಯುಂ, ಬಕನ ತತ್ತಿಯುಂ ಮುಂಗುರಿಗಳುಂ, ತಗರಿನ ಮತ್ತು ತೊತ್ತಿನ ಕಲಹದಿಂದ ಕಪಿಗಳು ಕೆಟ್ಟ ಕಥೆ ಈ ಎಲ್ಲ ಕಥೆಗಳು ಅದರೊಂದಿಗೆ ಎರಡನೆಯ ಪ್ರಕರಣವಾದ ಪರೀಕ್ಷಾವ್ಯಾವರ್ಣನಂ ದಲ್ಲಿ ಬ್ರಾಹ್ಮಣ ಮುಂಗುರಿಯಂ ಕೊಂದ ಕಥೆ, ಸೊಮಶರ್ಮನ ತಂದೆಯ ಕಥೆ, ಪರದನ ಕತೆ, ಅಜಿತನ ಕಥೆ, ವೃದ್ಧ ಗೌತಮಿ, ಈ ಮೇಲಿನ ಕಥೆಗಳು ಬರುತ್ತವೆ. ಅದರೊಂದಿಗೆ ಮೂರನೆಯ ವಿಶ್ವಾಸ ಪ್ರಕರಣಂ ದಲ್ಲಿ ಗುಗೆಗಳ್ ತುಂಬಿರ್ದ ಗುಹೆಯಂ ಕಾಗೆಗಳ್ ಸುಟ್ಟ ಕಥೆ, ಕಪಿಂಜರನುಂ, ಮೊಲನುಂ, ಪುಲಿಯುಂ, ನಾರಾಯಣ ಭಟ್ಟನ ಕಥೆ, ಶಿಶುಪಾಲನ ಕಥೆ, ಬುದ್ಧಿ ಹೇಳಿದ ಹಕ್ಕಿಯುಂ ಕಪಿಯು ಕೊಂದ ಕಥೆ, ಕಪೋತಂ ಕಿರಾತಂಗೆ ತನ್ನಸುವನ್ನಿತ್ತ ಕಥೆ, ಬ್ರಹ್ಮರಾಕ್ಷಸನುಂ ತಸ್ಕರನುಂ, ತುಂಗಭುಜನ ಕಥೆ, ಸತ್ತ ಪುಲಿಯನೆತ್ತಿದ ಗಾರುಡಿಗನ ಕಥೆ, ಮುನಿಯುಂ–ಇಲಿಯುಂ, ದುರ್ವಾಸನುಂ ನಾಯುಂ, ಕಪ್ಪೆಗಳಂ ಬೆನ್ನನೇರಿಸಿಕೊಂಡ ಸರ್ಪದ ಕಥೆ, ವಿಷ್ಣುಶರ್ಮನ ಕಥೆ ಇನ್ನು ನಾಲ್ಕನೆಯ ವಂಚನಾ ಪ್ರಕರಣದಲ್ಲಿ ಮೊಸಳೆಯಂ ಕಪಿ ವಂಚಿಸಿದ ಕಥೆ, ನರಿಯ ಮಾತಂ ನಂಬಿ ಸತ್ತ ಬೆಳ್ಗತ್ತೆಯ ಕಥೆ ಕೋನೆಯದಾಗಿ ಐದನೆಯ ಮಿತ್ರ ಕಾರ್ಯ ಪ್ರಕರಣದಲ್ಲಿ ಕಾಗೆಯುಂ ಆಮೆಯುಂ ಸಾರಂಗಮುಂ ಇಲಿಯುಂ, ಬ್ರಾಹ್ಮಣನುಂ ಏಡಿಯುಂ, ಅತಿಲೋಭಿಯಾದ ನರಿಯ ಕಥೆ, ಕಪ್ಪೆಯ ಕಥೆ, ಈ ಮುಂತಾದ ಮೇಲಿನ ಎಲ್ಲ ನೀತಿ ಕಥೆಗಳ ಮೂಲಕ ಪಂಚತಂತ್ರದಲ್ಲಿ ತಿಳಿಸಿದ ಅಂಶಗಳ ಆಧಾರದಿಂದ ಅಪರಾಧ ಭೇದಿಸುವ ತಂತ್ರಗಳನ್ನು ತಿಳಿಯಬಹುದಾಗಿದೆ.

ಈ ರೀತಿಯಾಗಿ ಪಂಚತಂತ್ರ ಕೃತಿಯ ಉಗಮದ ಕಥೆಯೂ ಕುತೂಹಲಕಾರಿಯಾದುದು; ಕ್ರಿ. ಶ 591–579ರ ವರೆಗೆ ಪರ್ಶಿಯಾ ದೇಶವನ್ನು ಆಳುತಿದ್ದ ಖೊಸ್ರನ್ ಅನೋಸೀರ್ವನ್ ಎಂಬ ಅರಸನ ಅಪೇಕ್ಷೆಯ ಮೇರೆಗೆ ಅವನ ಆಸ್ಥಾನದ ವೈದ್ಯ ಬೂರ್ಝೊಯಿ ಭಾರತಕ್ಕೆ ಬಂದು ಸತ್ತವರನ್ನು ಬದುಕಿಸುವ ಅದ್ಭುತ ಗಿಡ ಮೂಲಿಕೆಯನ್ನು ಶೋಧಿಸಿದನು. ಆದರೆ ಅದು ಎಲ್ಲಿಯೂ ಸಿಗಲಿಲ್ಲ! ನಿರಾಶನಾಗಿದ್ದ ವೈದ್ಯನಿಗೆ ಅನುಭವಿ ವೈದ್ಯ ಪಂಡಿತನು, 'ಪರ್ವತ ಎಂದರೆ ಪಂಡಿತರು, ಗಿಡಮೂಲಿಕೆ ಎಂದರೆ ಶಬ್ಧಗಳು, ಸತ್ತವರು ಎಂದರೆ ಅಜ್ಞಾನಿಗಳು' ಎಂದು ಹೊಸ ಅರ್ಥವನ್ನು ವಿವರಿಸಿದನು. ಕೂಡಲೇ ಆ ಜಾನ ವೈದ್ಯನು ರಾಜನ ಹತ್ತಿರ ಹೋಗಿ ಗ್ರಂಥವನ್ನು ಪಡೆದು ಅಭ್ಯಸಿಸಿ ನೆನಪಿನಿಂದ ಒಂದು ಗ್ರಂಥವನ್ನು ರಚಿಸಿ ಸ್ವದೇಶಕ್ಕೆ ಮರಳಿ ರಾಜನಿಗೆ ಅರ್ಪಿಸಿದನು. ಹಾಗೆ ವೈದ್ಯನಿಗೆ ಸ್ಫೂರ್ತಿ ನೀಡಿದ ಗ್ರಂಥವೇ ಈ 'ಪಂಚತಂತ್ರ'! ಈ ಕತೆಗಳನ್ನು ಕೇಳಿ ಖೊಸ್ರೊ ಸಂಜೀವಿನಿ ಮೂಲಿಕೆ ದೊರೆತದ್ದಕ್ಕಿಂತ ಹೆಚ್ಚು ಸಂತೋಷಪಟ್ಟನಂತೆ ಹೀಗೆ ಪಂಚತಂತ್ರದ ಮಹತ್ವವನ್ನು ಅನೇಕ ವಿದ್ವಾಂಸರು ಕೊಂಡಾಡಿದ್ದಾರೆ.

**ಪರಾಮರ್ಶನ ಗ್ರಂಥಗಳು**

1. ಡಿ. ಕೆ. ಜೋಶಿ, ದುರ್ಗಸಿಂಹನ ಪಂಚತಂತ್ರ ಕಥೆಗಳು, ಕೃಷ್ಣ ಜೋಶಿ ಪ್ರಕಾಶನ ಧಾರವಾಡ – 1989
2. ಡಾ. ಆರ್. ನಾಗರಾಜು, ಸುರಗಿರಿ, ಅನಾಕ ಪ್ರಕಾಶನ ಜೆ. ಪಾಳ್ಯ–572115 ತಾ: ಸಿರಾ ಜಿ: ತುಮಕೂರು – 2023
3. ಪಂಚತಂತ್ರ ಜಾಲತಾಣಗಳು
ಡಾ. ವಾಯ್. ವಾಯ್. ಕೊಕ್ಕನ್ನವರ, ಹಳಗನ್ನಡ ಸಾಹಿತ್ಯ ಚಂದ್ರಿಕೆ, ಅವ್ವ ಪುಸ್ತಕ ಪ್ರಕಾಶನ ಬೆಳಗಾವಿ – 2021